ವಾರ್ಡ್ ಸಂಖ್ಯೆ: 25 ಹೊರಮಾವು (110 ಹಳ್ಳಿಗಳನ್ನು ಹೊರತುಪಡಿಸಿ) ಶೇಕಡ 90% ಭಾಗ

ವಾರ್ಡ್ ಸಂಖ್ಯೆ: 26–ರಾಮಮೂರ್ತಿ ನಗರ ಶೇಕಡ 80% ಭಾಗ

ವಾರ್ಡ್ ಸಂಖ್ಯೆ: 51– ವಿಜಿನಾಪುರ, ಶೇಕಡ 90% ಭಾಗ.

ವಾರ್ಡ್ ಸಂಖ್ಯೆ: 52– ಕೆ.ಆರ್ ಪುರಂ, ಶೇಕಡ 80% ಭಾಗ.

ವಾರ್ಡ್ ಸಂಖ್ಯೆ: 53– ಬಸವನಪುರ, ಶೇಕಡ 45% ಭಾಗ.

ವಾರ್ಡ್ ಸಂಖ್ಯೆ: 55– ದೇವಸಂದ್ರ, ಶೇಕಡ 70% ಭಾಗ.

ವಾರ್ಡ್ ಸಂಖ್ಯೆ: 56– ಎ. ನಾರಾಯಣಪುರ, ಶೇಕಡ 90% ಭಾಗ.

ವಾರ್ಡ್ ಸಂಖ್ಯೆ: 81– ವಿಜ್ಞಾನ ನಗರ, ಶೇಕಡ 95% ಭಾಗ.

ವಾರ್ಡ್ ಸಂಖ್ಯೆ: 87– ಹೆಚ್.ಎ.ಎಲ್., ಶೇಕಡ 94% ಭಾಗ

(ಈ) ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ 110 ಹಳ್ಳಿಗಳನ್ನು ಹೊರತುಪಡಿಸಿ ಉಳಿದ ಹಿಂದಿನ ಕೆ.ಆರ್.ಪುರಂ ನಗರಸಭೆ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಉ) ಪ್ರಸಕ್ತ ಸಾಲಿನಲ್ಲಿ 110 ಹಳ್ಳಿಗಳನ್ನು ಹೊರತುಪಡಿಸಿ, ಉಳಿದ ಹಿಂದಿನ ನಗರಸಭೆ ಪ್ರದೇಶಗಳ ಭಾಗಗಳಿಗೆ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವೈದ್ಯಾಲಯವನ್ನು ಮಂಜೂರು ಮಾಡುವುದು

554 (444) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) :– ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ದಬ್ಬೇಘಟ್ಟ ಹೋಬಳಿಯಲ್ಲಿ ಪಶು ವೈದ್ಯಾಲಯದ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಪಶುವೈದ್ಯಾಲಯದ ಮಂಜೂರಾತಿಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು):–

(ಅ) ದಬ್ಬೇಘಟ್ಟ ಹೋಬಳಿಯಲ್ಲಿ ಪಶುಚಿಕಿತ್ಸಾಲಯವಿದ್ದು, ಅದನ್ನು ಪಶು ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ.

(ಆ) ಉದ್ಭವಿಸುವುದಿಲ್ಲ.

ಪತ್ತೆಯಾದ ವಿವಿಧ ಪ್ರಕರಣಗಳು

529 (940) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ :– ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪತ್ತೆಯಾದ ಕೊಲೆ, ದರೋಡೆ, ಕಳ್ಳತನ ವಂಚನೆ, ವರದಕ್ಷಣೆ ಸಾವಿನ ಪ್ರಕರಣಗಳೆಷ್ಟು; (ತಾಲ್ಲೂಕುವಾರು ಒದಗಿಸುವುದು)

(ಆ) ಈ ಪೈಕಿ ಯಾವ ಯಾವ ಪ್ರಕರಣಗಳಲ್ಲಿ ಎಫ್.ಐ.ಆರ್. ದಾಖಲೆ ಮಾಡಲಾಗಿದೆ; ಯಾವ ಯಾವ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ; ಇನ್ನೂ ಎಷ್ಟು ಪ್ರಕರಣಗಳು ಪತ್ತೆಯಾಗಿರುವುದಿಲ್ಲ.

(ಇ) ಯಾವ ಯಾವ ಪ್ರಕರಣಗಳಲ್ಲಿ ಯಾರು ಯಾರಿಗೆ ಶಿಕ್ಷೆಯಾಗಿವೆ;

(ಈ) ಜಿಲ್ಲೆಯಲ್ಲಿ ಹಲವಾರು ಪ್ರಕರಣಗಳಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು; ಈ ವಿಷಯವನ್ನು ಸಿ.ಐ.ಡಿ. ತನಿಖೆಗೆ ಆದೇಶಿಸುವುದೇ?